1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C. 98/2023

PW- 26

CW- 54

ಪ್ರ. ಬೋ. ದಿನಾಂಕಃ 05-05-2025

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ವಿಜಯ್ ಜಿ.ಎಸ್. |
| ತಂದೆ/ಗಂಡನ ಹೆಸರು | : | ಜಿ.ಶರಣಪ್ಪ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಪಿ ಎಸ ಐ , ಹರಿಹರ ನಗರ ಠಾಣೆ |
| ವಾಸ | : | ಹರಿಹರ ನಗರ |

ನಾನು ಹರಿಹರ ನಗರ ಪೊಲೀಸ್ ಠಾಣೆಯಲ್ಲಿ ದಿಃ 20-07-2021 ರಿಂದ 15-05-2023 ರವರೆಗೆ ಎ ಎಸ್ ಐ ಆಗಿ ಕೆಲಸ ನಿರ್ವಹಿಸುತ್ತಿದ್ದೆ.

ದಿಃ15-05-2023 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಬೆಳಿಗೆ 2-00 ಗಂಟೆಗೆ ಹಾಜರಾಗಿ ಚಾಸಾ-1 ಠಾಣೆಗೆ ಹಾಜರಾಗಿ ಲಿಖಿತ ದೂರು ಕೊಟ್ಟಿದ್ದು, ಸದರಿ ದೂರನ್ನು ನಾನು ಪಡೆದುಕೊಂಡು, ಸದರಿ ದೂರಿನ ಪ್ರಕಾರ ನಮ್ಮ ಠಾಣಾ ಗುನ್ನೆ ನಂ.81/23 ಕೇಸು ದಾಖಲು ಮಾಡಿಕೊಂಡು ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ಆ ದಿವಸ ಚಾಸಾ-1 ಇವರು ಕೊಟ್ಟಂತಹ ದೂರನ್ನು ನೋಡುತ್ತಿದ್ದು , ಅದರಲ್ಲಿ ನನ್ನ ರುಜು ಇದ್ದು ಅದನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-68 ಎ, ನನ್ನ ಸಹಿ ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಯನ್ನು ಚಾಸಾ-55 ಇವರಿಗೆ ವಹಿಸಿಕೊಟ್ಟಿರುತ್ತೇನೆ.

<u>ಪಾಟೀ ಸವಾಲು:-</u> ಆರೋಪಿತರಪರ ಶ್ರೀ ಪಿ ಬಿ ವಕೀಲರಿಂದ.

ದಿಃ 23-05-2024 ಕ್ಕೆ ನಾನು ಎ.ಎಸ್ಐ ಯಿಂದ ಪಿ.ಎಸ್ಐ ಆಗಿ ಮುಂಬಡ್ತಿ

ಹೊಂದಿರುತ್ತೇನೆ. ದಿಃ 15-05-2023 ರಂದು ನಾನು ರಾತ್ರಿ 9-00 ಗಂಟೆಯಿಂದ ಬೆಳಿಗ್ಗೆ 9-00 ಗಂಟೆಯವರೆಗೆ ನಮ್ಮ ಠಾಣಾ ಅಧಿಕಾರಿಯಾಗಿ ನಾನು ಕೆಲಸ ನಿರ್ವಹಿಸಿರುತ್ತೇನೆ. ದಿಃ 15-05-2023 ರಾತ್ರಿ 10-00 ಗಂಟೆ ನಂತರ ನಿಪಿ-1 ದೂರು ಕೊಡುವ ಪೂರ್ವದಲ್ಲಿ ನಮ್ಮ ಠಾಣೆಗೆ ಯಾರೂ ಹಾಜರಾಗಿ ದೂರು ಕೊಟ್ಟಿಲ್ಲ. ಅದೇ ಪ್ರಕಾರ ಆಸ್ಪತ್ರೆಯ ವೈದ್ಯರಾಗಲೀ, ಅಥವಾ ನಮ್ಮ ಮೇಲಾಧಿಕಾರಿಗಳಾಗಲೀ ಘಟನೆಗೆ ಸಂಬಂಧಪಟ್ಟಂತೆ ಯಾವುದೇ ಮಾಹಿತಿಯನ್ನು ನೀಡಿಲ್ಲ. ಕೇಸು ದಾಖಲಾದ ನಂತರ ಮುಂದಿನ ತನಿಖೆಯನ್ನು ಚಾಸಾ-55 ರವರಿಗೆ ಮಾರನೇ ದಿವಸ ಬೆಳಿಗ್ಗೆ ಕೇಸಿನ ಕಡತವನ್ನು ಕೊಟ್ಟಿರುತ್ತೇನೆ ಅದರೆ ಸಮಯ ನೆನಪಿಲ್ಲ. ಚಾಸಾ-55 ಇವರಿಗೆ ಈ ಕೇಸಿನ ಕಡತವನ್ನು ವಹಿಸಿಕೊಡುವುದಕ್ಕಿಂತ ಪೂರ್ವದಲ್ಲಿ ಈ ಕೇಸಿನ ಆರೋಪಿತರ ಪತ್ತೆಗಾಗಿ ನಾನು ಯಾವುದೇ ಕ್ರಮ ಜರುಗಿಸಿರುವುದಿಲ್ಲ.

ದೂರು ದಾಖಲು ಮಾಡಿಕೊಂಡ ನಂತರ ನಾನು ಆಸ್ಪತ್ರೆಗೆ ಭೇಟಿ ಕೊಟ್ಟಿಲ್ಲ ಹಾಗೂ ನನಗೆ ಆಸ್ಪತ್ರೆಯಿಂದ ಯಾವುದೇ ಮಾಹಿತಿ ಬಂದಿರುವುದಿಲ್ಲ. ದೂರು ದಾಖಲಾದ ನಂತರ ನಮ್ಮ ಮೇಲಾಧಿಕಾರಿಯವರಿಗೆ ನಾನು ಮಾರನೇ ದಿವಸ ಬೆಳಿಗ್ಗೆ ಮಾಹಿತಿ ನೀಡಿರುತ್ತೇನೆ. ದೂರು ಪಡೆಯುವುದಕ್ಕಿಂತ ಪೂರ್ವದಲ್ಲಿ ನಮ್ಮ ಮೇಲಾಧಿಕಾರಿಗಳು ನಮ್ಮ ಠಾಣೆಗೆ ಭೇಟಿ ಕೊಟ್ಟಿಲ್ಲ. ಹಾಗೂ ಈ ಕೇಸಿನ ಕಡತವನ್ನು ಚಾಸಾ-55 ಇವರಿಗೆ ಕೊಡುವವರಗೂ ಸಹಿತ ನಮ್ಮ ಮೇಲಾಧಿಕಾರಿಗಳು ನಮ್ಮ ಠಾಣೆಗೆ ಭೇಟಿ ಕೊಟ್ಟಿರುವುದಿಲ್ಲ. ಚಾಸಾ-1 ಇವರು ದೂರು ಕೊಡುವ ಸಮಯದಲ್ಲಿ ಅವರ ಜೊತೆ ಬೇರೆ ಯಾರು ಬಂದಿದ್ದರು ಎನ್ನುವುದು ನನಗೆ ನೆನಪಿಲ್ಲ .

ನಿಪಿ-1 ದೂರನ್ನು ನಮ್ಮ ಠಾಣೆಗೆ ಕೊಡುವ ಪೂರ್ವದಲ್ಲಿ ಮೊದಲೇ ತಯಾರು ಮಾಡಿಕೊಂಡು ಬಂದಿದ್ದರು. ನಿಪಿ-1 ಪ್ರ.ವ.ವರದಿ 1 ಮತ್ತು 3 ನೇ ಪುಟದಲ್ಲಿರುವ ಬರವಣಿಗೆ ಒಂದು ರೀತಿ ಇದ್ದು, 2 ನೇ ಪುಟದಲ್ಲಿರುವ ಬರವಣಿಗೆ ಇನ್ನೊಂದು ರೀತಿಯಲ್ಲಿರುತ್ತದೆ ಕೇಳಿದ ಪ್ರಶ್ನೆಗೆ ಸಾಕ್ಷಿ , ಬೇರೆ ಬೇರೆ ಕಾಣುತ್ತದೆ ಎಂದು ಉತ್ತರಿಸುತ್ತಾರೆ. ನಿಪಿ-1 ಪುಟ 2 ರಲ್ಲಿ ಇರತಕ್ಕಂತಹ ಬರವಣಿಗೆ ಚಾಸಾ-1 ಇವರ ಹಾಗೂ ಇನ್ನಿತರ ಪ್ರಭಾವಕ್ಕೆ ಒಳಗಾಗಿ ಅವರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶಕ್ಕಾಗಿ ಸದರಿ ವಿಷಯವನ್ನು ನಾವು ಹೇಳಿ ಬರೆಸಿರುತ್ತೆವೆ ಎನ್ನುವುದು ಸುಳ್ಳು . ನಿಪಿ-1 ರ ಪುಟ 1 ಮತ್ತು 2 ರಲ್ಲಿ ಪಿರ್ಯಾದಿಯ ರುಜು ಇರುವುದಿಲ್ಲ. ಆದರೆ ಕೊನೆಯ ಪುಟದಲ್ಲಿರುತ್ತದೆ.

ಚಾಸಾ-1 ಇವರು ನಮ್ಮ ಠಾಣೆಗೆ ಆ ದಿನ ಬೆಳಗಿನ ಜಾವ 2-00 ಗಂಟೆಗೆ

ಬಂದಿದ್ದು, ನಿಪಿ–1 ದೂರು ಕೊಟ್ಟಿದು, ನಂತರ ಸದರಿ ಕೇಸನ್ನು ನಾನು ಬೆಳಗಿನ ಜಾವ 3–00 ಗಂಟೆ ನೋಂದಣಿ ಮಾಡಿಕೊಂಡಿರುತೇನೆ. ಬೆಳಿಗ್ಗೆ 2–00 ರಿಂದ 3–00 ಗಂಟೆಯ ಅವಧಿಯೊಳಗೆ 1 ತಾಸು ತಡವಾಗಿದ್ದರ ಬಗ್ಗೆ ನಿಪಿ–1 ರಲ್ಲಿ ಕಾರಣ ನಮೂದು ಮಾಡಿರುವುದಿಲ್ಲ. ನಿಪಿ–1 ದೂರಿನ 2 ನೇ ಪುಟದಲ್ಲಿರುವ ವಿಷಯವನ್ನು ನಮಗೆ ಅನುಕೂಲವಾಗುವ ರೀತಿಯಲ್ಲಿ ತಿದ್ದುಪಡಿ ಮಾಡುವುದಕ್ಕೊಸ್ಕರವಾಗಿ ಒಂದು ಗಂಟೆ ಸಮಯವನ್ನು ನಾನು ಪಡೆದುಕೊಂಡಿರುತ್ತೇನೆ ಎನ್ನುವುದು ಸುಳ್ಳು. ನಿಪಿ–1 ದೂರನ್ನು ನಾನು ಪರಿಶೀಲನೆ ಮಾಡಿರುತ್ತೆನೆ. ನಿಪಿ–1 ಪುಟ–2 ರಲ್ಲಿ ತಿದ್ದುಪಡಿಯಾಗಿದ್ದು ಆ ತಿದ್ದುಪಡಿ ಯಾದ ಸ್ದಳದಲ್ಲಿ ಪಿರ್ಯಾದಿಯ ರುಜು ಪಡೆದಿರುವುದಿಲ್ಲ. ಘೂೕರವಾದ ಪ್ರಕರಣಗಳಲ್ಲಿ ದೂರು ಪಡೆದುಕೆಂಡ ತಕ್ಷಃಣ ನಮ್ಮ ಮೇಲಾಧಿಕಾರಿಯವರಿಗೆ ತಿಳಿಸಬೇಕು ಎಂಬ ನಿಯಮವಿದೆ. ಆ ಪ್ರಕಾರ ನಾನು ತಿಳಿಸಿದ್ದೇನೆ. ತಕ್ಷಣ ನಾನು ನಮ್ಮ ಮೇಲಾಧಿಕಾರಿಯವರಿಗೆ ತಿಳಿಸಿಲ್ಲದ್ದಿದ್ದರೂ ಸಹಿತ ತಿಳಿಸಿರುತ್ತೇನೆ ಅಂತ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹರಿಹರ ಪೊಲೀಸ್ ಠಾಣೆಯಲ್ಲಿ ಒಟ್ಟು 10 ವರ್ಷ ಸೇವೆ ಸಲ್ಲಿಸಿರುತ್ತೇನೆ. ಪಿರ್ಯಾದಿಯ ಮಾವ ಹರಿಹರ ನಗರದಲ್ಲಿ ಎಗ್ ರೈಸ್ ಅಂಗಡಿ ಇಟ್ಟುಕೊಂಡಿರುತ್ತಾನೆ ಎಂಬ ಬಗೆಗ ನನಗೆ ಮಾಹಿತಿ ಇಲ್ಲ. ಪಿರ್ಯಾದಿ ಮಾವ ಮತ್ತು ನಾವು ವಿಶ್ವಾಸಿಗರಾಗಿದ್ದು, ಅವರಿಗೆ ಅನುಕೂಲವಾಗಬೇಕು ಎಂಬ ಕಾರಣದಿಂದ ಚಾಸಾ–1 ರವರ ಕೊಟ್ಟ ಸುಳ್ಳು ದುರಾನ್ನು ಪಡೆದುಕೊಂಡು ಸುಳ್ಳು ಕೇಸು ದಾಖಲು ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸುಳ್ಳು. ಮೇಲಾಧಿಕಾರಿಯವರಿಗೆ ಮುಂದಿನ ತನಿಖೆ ವಹಿಸಿಕೊಡುವುದಕ್ಕಿಂತ ಪೂರ್ವದಲ್ಲಿ ಆಸ್ಪತ್ರೆಗೆ ನಮ್ಮ ಸಿಬ್ಬಂದಿಯನ್ನು ನೇಮಕ ಮಾಡಿರುವುದಿಲ್ಲ. ದೂರು ದಾಖಲು ಮಾಡಿಕೊಂಡ ನಂತರ ಸದರಿ ಪ್ರಕರಣವನ್ನು ಚಾಸಾ–55 ಇವರಿಗೆ ಕೊಡುವುದಕ್ಕಿಂತ ಪೂರ್ವದಲ್ಲಿ ಈ ಕೇಸಿನಲ್ಲಿ ನಾನು ಬೇರೆ ಯಾವುದೇ ಕ್ರಮ ಜರುಗಿಸಿರುವುದಿಲ್ಲ.

ಮರುವಿಚಾರಣೆ:– ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.